ಕೊಡಲಿಕ್ಕೆ ತಮಗೆ ಹಕ್ಕಿದೆ. ಆದರೆ ಇವತ್ತು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದಂಥ ವಿಷಯದ ಬಗ್ಗೆ ಒಂದು ಸಂಪೂರ್ಣವಾದಂಥ ನೋಟ್‌ನ್ನು ಕಳುಹಿಸುವಂಥಾದ್ದು ಪತ್ರಕರ್ತರೊಂದಿಗೆ ತೀರ್ಮಾನ ತೆಗೆದುಕೊಳ್ಳುವಂಥಾದ್ದು, ಆ ರೀತಿಯೇ ಮುದ್ರಣ ಮಾಡಬೇಕೆಂದು ಹೇಳುವಂಥಾದ್ದು....

**ಅಧ್ಯಕ್ಷರು :-** ನಾವೇ ಒಂದು ಕೊಡುತ್ತೇವೆಲ್ಲಾ.....

**ಶ್ರೀ ಜಗದೀಶ್ ಶೆಟ್ಟರ್ :-** ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಚರ್ಚೆಯಾಗಿದೆ. ಯಾವುದಾದರೂ ಅನ್‌ಪಾರ್ಲಿಮೆಂಟರಿ ಶಬ್ದ ಇದ್ದರೆ ತಾವು ತೆಗೆಯಿರಿ.

**ಅಧ್ಯಕ್ಷರು :-** ಆದರೆ ಅದನ್ನು ನಾನು ನೋಡಬೇಕಲ್ಲಾ?

**ಶ್ರೀ ಜಗದೀಶ್ ಶೆಟ್ಟರ್ :-** ಚರ್ಚೆಯಾದ ವಿಷಯಕ್ಕೆ ಸಂಬಂಧಪಟ್ಟಂತೆ ತಾವೇ ಒಂದು ಹೇಳಿಕೆ ಕೊಡುವಂಥಾದ್ದು ಅದು ಸರಿಯಾದಂಥ ಸಂಪ್ರದಾಯ ಅಲ್ಲ. ಈವರೆಗೆ ಆ ರೀತಿ ಸಂಪ್ರದಾಯ ಇಲ್ಲ.

**ಅಧ್ಯಕ್ಷರು :-** ಇಲ್ಲಿ ಯಾವುದು ತೆಗೆದುಕೊಳ್ಳಬೇಕು. ಯಾವುದು ತೆಗೆದುಕೊಳ್ಳಬಾರದು ಎಂಬುದನ್ನು ಕೊಡುತ್ತೇವೆ ಅಷ್ಟೆ.

**ಶ್ರೀ ಜಗದೀಶ್ ಶೆಟ್ಟರ್ :-** ಅಷ್ಟಿದ್ದರೆ ಅಡ್ಡಿಯಿಲ್ಲ.

**ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ :-** ಅಧ್ಯಕ್ಷರೇ.....

(ಗೊಂದಲ)

**ಅಧ್ಯಕ್ಷರು :-** ಈಗ ಸದನವನ್ನು 2.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1ಗಂಟೆ 25 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಬೇಕೆಂದು ನಿರ್ಧರಿಸಲಾಯಿತು.

(ಸದನವು ಪುನಃ 3.20ಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

## 8. ಅಧ್ಯಕ್ಷರ ತೀರ್ಪು

**ಅಧ್ಯಕ್ಷರು :-** ಒಂದು ಪ್ರಕಟಣೆ ಇದೆ.

**ದಿ: 21.3.03ರಂದು ಬೆಂಗಳೂರು ಸಿಟಿ ಮಾರ್ಕೆಟ್ ಬಳಿ ನಡೆದಂಥ ಘಟನೆ ಕುರಿತು ನಡೆದಂಥ ಚರ್ಚೆಯಲ್ಲಿನ ಕೆಲವು ಪದಗಳನ್ನು ಕಡತದಿಂದ ತೆಗೆದು ಹಾಕಿರುವ ಬಗ್ಗೆ.**

ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ರವರು ಇಂದು ಸದನ ಪ್ರಾರಂಭವಾದಾಗ ದಿನಾಂಕ 21.03.2003ರಂದು ಸಿಟಿ ಮಾರುಕಟ್ಟೆ ಪ್ರದೇಶದಲ್ಲಿ ಅಲ್ಪಸಂಖ್ಯಾತರ ವರ್ಗ (ಮುಸ್ಲಿಮ್) ದವರು ಪ್ರತಿಭಟನೆ ನಡೆಸಿ ಜಾರ್ಜ್ ಬುಶ್ ಹಾಗೂ ಅಮೇರಿಕಾ ರಾಷ್ಟ್ರ ಧ್ವಜದ ಭೂತದಹನ ಮಾಡಿದ ಹಿನ್ನೆಲೆಯಲ್ಲಿ ಉಂಟಾಗಿರುವ ಗಲಭೆ ಬಗ್ಗೆ ನಿಲುವಳಿ ಸೂಚನೆ ಪ್ರಸ್ತಾವಕ್ಕೆ ಬಂದಾಗ, ವಿಧಾನ ಸಭಾಧ್ಯಕ್ಷರು ಈ ವಿಷಯವನ್ನು ಪ್ರಶ್ನೋತ್ತರ ವೇಳೆ ನಂತರ ಪ್ರಸ್ತಾಪಿಸಲು ಅವಕಾಶ ನೀಡುವುದಾಗಿ ಹೇಳಿದಂತೆ, ಪ್ರಶ್ನೋತ್ತರ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಎದ್ದಾಗ ನಿಲುವಳಿ ಸೂಚನೆಗೆ ವಿರೋಧ ವ್ಯಕ್ತ ಪಡಿಸಿದಾಗ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಲಾಯಿತು.